ಸೆಲೆಬ್ರಿಟಿ ■ ಹನಿ

# ದುಬಾರಿ ಛೆಟ್ರಿ



ಭಾರತೀಯ ಫುಟ್‌ಬಾಲ್ ರಂಗದಲ್ಲಿ ಸದ್ಯಕ್ಕೆ ಕಣ್ಣು ಕೋರೈಸುವಂತೆ ಮಿಂಚುತ್ತಿರುವ ಆಟಗಾರ ಸುನಿಲ್ ಛೆಟ್ರಿ. ಬೆಂಗಳೂರಿನ ಐ ಲೀಗ್ ಮತ್ತು ಸೂಪರ್ ಲೀಗ್ ಪಂದ್ಯಗಳನ್ನು ವೀಕ್ಷಿಸಿದವರಿಗೆ ಈ ಛೆಟ್ರಿ ಅಭಿಮಾನಿಗಳ ಬಳಗ ಎಷ್ಟೊಂದು ದೊಡ್ಡದಿದೆ ಎನ್ನುವುದರ ಅರಿವಾಗುತ್ತದೆ. ಪಂದ್ಯದುದ್ದಕ್ಕೂ ಸಹಸ್ರಾರು ಪ್ರೇಕ್ಷಕರು 11ನೇ ನಂಬರ್‌ನ ಬೆನ್ನನ್ನು ಫಾಲೋ ಮಾಡುತ್ತಾ 'ಛೆಟ್ರಿ ಛೆಟ್ರಿ...' ಎಂದು ಕೂಗುವುದು ಕ್ರಿಕೆಟ್ ಮೈದಾನದಲ್ಲಿ ಅಭಿಮಾನಿಗಳು 'ಕೊಹ್ಲಿ ಕೊಹ್ಲಿ..' ಎಂದು ಕೂಗಿದಂತೆಯೇ ಕೇಳಿಸುತ್ತದೆ. ಸದ್ಯಕ್ಕೆ ಭಾರತೀಯ ಫುಟ್‌ಬಾಲ್ ರಂಗದ ಅತ್ಯಂತ ದುಬಾರಿ ಆಟಗಾರ ಈ ಛೆಟ್ರಿ. ಬೆಂಗಳೂರು ಫುಟ್‌ಬಾಲ್ ಕ್ಲಬ್ ಪರವಾಗಿ ಕಳೆದ 4 ವರ್ಷಗಳಿಂದ ಆಡುತ್ತಿರುವ ಸುನಿಲ್ ಛೆಟ್ರಿ, 2015ರಲ್ಲೊಮ್ಮೆ ಮುಂಬೈ ಸಿಟಿ ಕ್ಲಬ್ ತಂಡಕ್ಕೆ 1.2 ಕೋಟಿ ರೂಪಾಯಿಗೆ ಎರವಲು ಸೇವೆಗೆ ಹೋಗಿದ್ದ. ಆದರೆ ಬೆಂಗಳೂರು ಕ್ಲಬ್ 1.5 ಕೋಟಿ ರೂಪಾಯಿ ಕೊಟ್ಟು ಆತನನ್ನು ಮರಳಿ ಪಡೆದಿತ್ತು. ಯೂರೋಪಿನ ಫುಟ್‌ಬಾಲ್ ಕ್ಲಬ್‌ಗಳಂತೆ ನೂರಾರು ಕೋಟಿ ರೂಪಾಯಿಗಳ ಏಲಂ ನಮ್ಮಲ್ಲಿ ನಡೆಯುವುದಿಲ್ಲವಾದರೂ, ಭಾರತದ ಮಟ್ಟಿಗೆ ಸುನಿಲ್ ಛೆಟ್ರಿಯದ್ದೇ ದಾಖಲೆ ಮೊತ್ತದ ಒಪ್ಪಂದ.

ಭಾರತದ ಫುಟ್‌ಬಾಲ್ ತಂಡದ ನಾಯಕನೂ ಆಗಿರುವ ಸುನಿಲ್ ಛೆಟ್ರಿ, ಭಾರತದ ಪರವಾಗಿ ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಅತ್ಯಧಿಕ ಗೋಲು ಹೊಡೆದಿರುವ ದಾಖಲೆಯನ್ನೂ ಹೊಂದಿದ್ದಾನೆ. 97 ಪಂದ್ಯಗಳಲ್ಲಿ 56 ಗೋಲುಗಳನ್ನು ಹೊಡೆಯುವುದೆಂದರೆ ಅದು ಸುಲಭದ ಮಾತಲ್ಲ. ಕಳೆದ ವರ್ಷ ಕೂಡಾ ಹೀಗೆಯೇ ಅಂತರರಾಷ್ಟ್ರೀಯ ಕ್ಲಬ್ ಪಂದ್ಯಗಳಲ್ಲೂ 54 ಗೋಲುಗಳನ್ನು ಹೊಡೆದು ಹೊಸ ದಾಖಲೆಯನ್ನು ನಿರ್ಮಿಸಿದ್ದ ಈ ಛೆಟ್ರಿ. ಆ ಫುಟ್‌ಬಾಲ್ ಋತುವಿನಲ್ಲಿ ಗೋಲುಗಳ ಸಂಖ್ಯೆಯಲ್ಲಿ ವಿಶ್ವಖ್ಯಾತಿಯ ಆಟಗಾರರಾದ ರೊನಾಲ್ಡೊ, ಲಯೊನಲ್ ಮೆಸ್ಸಿ ಮತ್ತು ಕ್ಲಿಂಟ್ ಡೆಂಪ್ಸಿ ನಂತರದ ನಾಲ್ಕನೆಯ ಸ್ಥಾನ ಛೆಟ್ರಿಯದ್ದಾಗಿತ್ತು.

ಫುಟ್‌ಬಾಲ್ ನಲ್ಲಿ ಮುನ್ಪಡೆ ಆಟಗಾರರದ್ದು ಮಹತ್ವದ ಕೊಡುಗೆ. ಎದುರಾಳಿ ತಂಡದ ಭದ್ರಕೋಟೆಯೊಳಕ್ಕೆ ಚೆಂಡಿನ ಸಮೇತ ನುಗ್ಗಿ ಮಿಂಚಿನ ವೇಗದಲ್ಲಿ ಗೋಲು ಗಳಿಸುವ ಈ ಮುನ್ಪಡೆ ಆಟಗಾರರು, ಆ ಮೂಲಕ ಹಿಂದಿನ ಸಾಲಿನಲ್ಲಿ ನಿಲ್ಲುವ ರಕ್ಷಣಾ ಆಟಗಾರರಿಗೂ ಅತೀವ ಆತ್ಮವಿಶ್ವಾಸ ತುಂಬುತ್ತಾರೆ. ಪಂದ್ಯದ ಆರಂಭದಲ್ಲೇ ಒಂದೆರಡು ಗೋಲು ಬಿದ್ದರೆ ಆ ತಂಡ ಗೆದ್ದಂತೆಯೇ. ಛೆಟ್ರಿಯ ಹೆಗ್ಗಳಿಕೆಯೆಂದರೆ, ಎದುರಾಳಿ ತಂಡದ ವ್ಯೂಹರಚನೆಯನ್ನು ಕ್ಷಣಮಾತ್ರದಲ್ಲಿ ಬೇಧಿಸಿ ಮುನ್ನುಗ್ಗುವುದು. ಅಷ್ಟೇನೂ ಎತ್ತರವಿಲ್ಲದ ಛೆಟ್ರಿ, ಎದುರಾಳಿ ತಂಡದ ಎತ್ತರದ ಆಟಗಾರರ ಮಧ್ಯೆ ನುಸುಳಿ ಚೆಂಡನ್ನು ತಿರುಗಿಸಿ ಒದೆಯುವುದನ್ನು ನೋಡುವುದೇ ಒಂದು ಸೊಗಸು. ಹಾಗೆಂದೇ ಪಂದ್ಯದ ಆರಂಭದಿಂದಲೇ ಎದುರಾಳಿ ತಂಡದ 2–3 ಆಟಗಾರರದು ಸದಾ ಛೆಟ್ರಿಯ ಸುತ್ತಮುತ್ತಲೇ ಠಳಾಯಿಸುತ್ತಿರುತ್ತಾರೆ.

33ರ ಹರೆಯದ ಛೆಟ್ರಿ ಹುಟ್ಟಿದ್ದು ಸಿಕಂದರಾಬಾದ್‌ನಲ್ಲಿ. ಅಪ್ಪ ಭಾರತೀಯ ಸೇನೆಯ ಎಂಜಿನಿಯರಿಂಗ್ ವಿಭಾಗದಲ್ಲಿ ಅಧಿಕಾರಿ, ಜತೆಗೆ ಸೇನೆಯ ಫುಟ್‌ಬಾಲ್ ತಂಡದಲ್ಲಿ ಪ್ರಮುಖ ಆಟಗಾರ. ಅಮ್ಮ ಕೂಡಾ ನೇಪಾಳದ ಫುಟ್‌ಬಾಲ್ ತಂಡದಲ್ಲಿ ಆಟಗಾರ್ತಿ ಆಗಿದ್ದಾಕೆ. ಹೀಗಾಗಿ ಸುನಿಲ್‌ಗೆ ಫುಟ್‌ಬಾಲ್ ಅನುವಂಶೀಯ ಬಳುವಳಿ. 2002ರಲ್ಲಿ ಕೋಲ್ಕತ್ತಾದ ಮೋಹನ್ ಬಾಗನ್ ಕ್ಲಬ್‌ನಲ್ಲಿ ಸ್ಥಾನ ಪಡೆದ ಛೆಟ್ರಿ, ಬಂಗಾಳದ ಫುಟ್‌ಬಾಲ್ ಹುಲಿಗಳ ನಡುವೆಯೇ ಆಟಕ್ಕೆ ಮೊನಚು ರೂಢಿಸಿಕೊಂಡವನು. ಬಾಗನ್ ಬಿಟ್ಟು ಜೆಸಿಟಿ ತಂಡ ಸೇರಿದ ಈತನ ಗೋಲುಗಳ ಹಸಿವು ಎಷ್ಟಿತ್ತೆಂದರೆ, ಆ ಸೀಸನ್‌ನಲ್ಲಿ 48 ಪಂದ್ಯಗಳಲ್ಲಿ 21 ಗೋಲು ಹೊಡೆದು ರಾಷ್ಟ್ರದ ಅತ್ಯಧಿಕ ಗೋಲುದಾರ ಎಂಬ ಹೆಗ್ಗಳಿಕೆ ಪಡೆದ. ಅಮೆರಿಕದ ಕನ್ಸಾಸ್ ಸಿಟಿ ವಿಜಾರ್ಡ್ಸ್ ತಂಡದಿಂದ ಕರೆ ಬಂತು. ಭಾರತೀಯ ಉಪಖಂಡದಿಂದ ವಿದೇಶೀ ತಂಡಕ್ಕೆ ಜಿಗಿದ ಮೂರನೇ ಆಟಗಾರ ಎಂಬ ಹೆಗ್ಗಳಿಕೆಯೊಂದಿಗೆ ಅಮೆರಿಕಕ್ಕೆ ತೆರಳಿದ ಛೆಟ್ರಿ, ಮರುಸೀಸನ್‌ನಲ್ಲೇ ಭಾರತಕ್ಕೆ ಮರಳಿದ. ಭಾರತದ ಐ ಲೀಗ್‌ನಲ್ಲಿ ಚಿರಾಗ್ ಯುನೈಟೆಡ್ ಮತ್ತು ಮೋಹನ್ ಬಾಗನ್ ತಂಡದ ಪರವಾಗಿ ಆಡಿದ. ಈ ಮಧ್ಯೆ ಫುಟ್‌ಬಾಲ್ ಪ್ರಿಯರ ಕನಸಿನ ದೇಶವಾದ ಪೋರ್ಚುಗಲ್‌ಗೆ ತೆರಳಿ ಅಲ್ಲಿನ ಸ್ಪೋರ್ಟಿಂಗ್ ಕ್ಲಬ್ ಸೇರಿದ. ಪೋರ್ಚುಗಲ್‌ನಿಂದ ಮರಳಿದ ಬಳಿಕ ಛೆಟ್ರಿಯ ಮಾರುಕಟ್ಟೆ ಬೆಲೆ ಒಂದೇ ಸಮನೆ ಏರಿತು.

ಭಾರತ ತಂಡ ನೆಹ್ರೂ ಕಪ್ ಗೆಲ್ಲುವುದರಲ್ಲಿ 2007, 2009 ಮತ್ತು 2012ರಲ್ಲಿ ಮಹತ್ವದ ಪಾತ್ರ ವಹಿಸಿದ್ದು ಛೆಟ್ರಿ. ಹಾಗೆಯೇ 2011ರಲ್ಲಿ ಸಾಫ್ (ದಕ್ಷಿಣ ಏಷ್ಯಾ) ಚಾಂಪಿಯನ್ ಆಗುವಲ್ಲೂ ನೆರವಾದ. ಹಾಗೆಂದೇ 2007, 2011, 13 ಮತ್ತು 14ರಲ್ಲಿ ಈತ ಆಲ್ ಇಂಡಿಯಾ ಫುಟ್‌ಬಾಲ್ ಫೆಡರೇಷನ್‌ನ ವರ್ಷದ ಆಟಗಾರ ಪ್ರಶಸ್ತಿ ಗೆದ್ದುಕೊಂಡ. ಅರ್ಜುನ ಪ್ರಶಸ್ತಿಯೂ ಹುಡುಕಿಕೊಂಡು ಬಂತು. 2016–17ರಲ್ಲಿ ಐ ಲೀಗ್‌ನ 'ಹೀರೋ ಆಫ್ ದಿ ಟೂರ್ನಿ' ಗೆದ್ದರೆ, 2017–18ರಲ್ಲಿ ಇಂಡಿಯನ್ ಸೂಪರ್ ಲೀಗ್‌ನಲ್ಲೂ ಈತನೇ ಹೀರೊ. ಬಹುಶಃ ಬೈಚುಂಗ್ ಭುಟಿಯಾ ಬಳಿಕ ಭಾರತದ ಫುಟ್‌ಬಾಲ್ ರಂಗದಲ್ಲಿ ಈತನಷ್ಟು ಸದ್ದು ಮಾಡಿದವರು ಇನ್ನೊಬ್ಬರಿಲ್ಲ.

ಕಳೆದ ವರ್ಷ ಡಿಸೆಂಬರ್‌ನಲ್ಲಿ ಬಹುಕಾಲದ ಗೆಳತಿ ಸೋನಂ ಭಟ್ಟಾಚಾರ್ಯ ಜತೆಗೆ ಮದುವೆಯಾದ ಛೆಟ್ರಿ, ಈಗ ಕೋಲ್ಕತ್ತಾದ ಅಳಿಯ. ಸೋನಂ ಭಾರತದ ಫುಟ್‌ಬಾಲ್‌ನಲ್ಲಿ ದಂತಕಥೆಯಾಗಿರುವ ಮೋಹನ್ ಬಾಗನ್ ತಂಡದ ಜೀವನಾಡಿ, ಸುಬ್ರತೊ ಭಟ್ಟಾಚಾರ್ಯರ ಮಗಳು. ಸ್ಕಾಟ್ಲೆಂಡ್ ವಿವಿಯಲ್ಲಿ ಬಿಬಿಎಂ ಪದವಿ ಪಡೆದಿರುವ ಸೋನಂ, ಕೋಲ್ಕತ್ತಾದಲ್ಲಿ ಎರಡು ರೆಸ್ಟೋರೆಂಟ್‌ಗಳ ಒಡತಿಯೂ ಹೌದು. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65